# ಕೃಷ್ಣ ಬೃಂದಾವನದಿ ಕೊಳಲೂದಲಿಲ್ಲವೇ

**Note:** This song is not available in the standard books that were referred. Obtained from the social / internet media while browsing. The lyrics are taken from the singer's video itself and the same is presented here.

ಕೃಷ್ಣ ಬೃಂದಾವನದಿ ಕೊಳಲೂದಲಿಲ್ಲವೇ || ಪ ||

ಅಂದು ಗೋಪಿಯರನ್ನು ಕರೆಯಲಿಲ್ಲವೇ
ಇಂದೇಕೆ ಮರೆತೆಯೋ ಮಾಧವಾ
ನೀ ಬಂದು ಕಾಯೋ ಎನ್ನ ಕೇಶವಾ || ಅಪ ||

ನೀರೊಳಾಟವ ನೀನಾಡಲಿಲ್ಲವೇ
ನೀ ಭಾರವ ಬೆನ್ನೊಳೆತ್ತಲಿಲ್ಲವೇ
ಕೋರೆಯ ಮಸೆಯುತ್ತ ತಿರುಗಲಿಲ್ಲವೇ
ನೀ ಪೋರನ ಮಾತಿಗೆ ಬರಲಿಲ್ಲವೇ || ೧ ||

ಪೊಡವಿ ದಾನವ ನೀ ಬೇಡಲಿಲ್ಲವೇ
ನೀ ಬಡವ ಬ್ರಾಹ್ಮಣನಾಗಿ ತಿರುಗಲಿಲ್ಲವೇ
ಮಡದಿಯ ಕಟ್ಟಿಕೊಂಡು ಪೋಗಲಿಲ್ಲವೇ
ನೀ ಕಡಗೋಲು ಕೈಯಲ್ಲಿ ಪಿಡಿಯಲಿಲ್ಲವೇ || ೨ ||

ಬತ್ತಲೆ ಬೌದ್ಧನಾಗಿ ನಿಲ್ಲಲಿಲ್ಲವೇ
ನೀ ಉತ್ತಮ ತೇಜಿಯ ನೇರಲಿಲ್ಲವೇ
ಹತ್ತಾವತಾರವ ತೋರಲಿಲ್ಲವೇ
ನೀ ಮತ್ತೆ ಶ್ರೀ ಪುರಂದರ ವಿಠಲನಲ್ಲವೇ || ೩ ||

**Classification:** Keerthane
**Ankita:** sri purandara vittala
**Location:** NA
**Category:** Krishna Stuti, Dashavatara
**Group Words:** Krishna, vrindavana, kolalu, gopi, Madhava, keshava, niru, kaadu, dana, brahmana, patni, kudure, dashavatara

**Pravachana:** NA

**Explanation:** NA